ಪಿ ಡಬ್ಲ್ಯೂ-1

ಸಾಕ್ಷಿಯನ್ನು ದಿಃ 07.04.2021 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು 1 ನೇ ಎದುರುದಾರರ ಪರ ಶ್ರೀ ಕೆ ಎಂ ವಕೀಲರಿಂದಃ**

ನಾನು ಅವಿದ್ಯಾವಂತ. ನನ್ನ ಅರ್ಜಿಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಮಗ ಕೆಲಸ ಮಾಡುತ್ತಿದ್ದ ಕಂಪನಿಯ ಮಾಲೀಕರು ಯಾರು ಆ ಕಂಪನಿ ಎಲ್ಲಿ ಇದೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ. ಆ ಕಂಪನಿಯ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿದ್ದೇನೆ. ನನ್ನ ಮಗ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ಮಗ ಎ.ಎಫ್.ಎಂ. ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ, ನಿಪಿ-7 ರ ದಾಖಲೆಯನ್ನು ನಾನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಸವಾರಿ ಮಾಡುತ್ತಿದ್ದ ದ್ವಿಚಕ್ರ ವಾಹನದ ಚಾಲಕ ಹಾಗೂ ಮಾಲಿಕ ಯಾರು ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಂಜಣ್ಣ ಎನ್ನುವವರು ಆ ದ್ವಿಚಕ್ರ ವಾಹನದ ಮಾಲಿಕರು ಎಂದು ಉತ್ತರಿಸುತ್ತಾರೆ.

ಆ ದ್ವಿಚಕ್ರ ವಾಹನ ಮಂಜಣ್ಣನ ಹೆಸರಿಗೆ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ನೋಂದಣಿಯಾದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮಗನಿಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಪರವಾನಗೆ ಇರಲಿಲ್ಲ ಎಂದರೆ ಸರಿಯಲ್ಲ. ಕೆಎ-16-ಆರ್ 3495 ರ ದ್ವಿಚಕ್ರ ವಾಹನದ ಚಾಲಕ ಹಾಗೂ ಮಾಲೀಕ ಯಾರು ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣದ ಉಲ್ಲೇಖಿತ ಅಪಘಾತದ ಬಗ್ಗೆ ಮಹಲಿಂಗಪ್ಪ ಎನ್ನುವವರು ದೂರು ಕೊಟ್ಟಿದ್ದರು. ಸದರಿ ಮಹಲಿಂಗಪ್ಪ ನನ್ನ ಅಳಿಯ ಎಂದರೆ ಸರಿ. ಮಹಲಿಂಗಪ್ಪ ಪೋಲೀಸರಿಗೆ ಕೊಟ್ಟ ದೂರಿನಲ್ಲಿ ಏನು ಬರೆದಿದ್ದಾರೆ ಎನ್ನುವುದನ್ನು ನಾನು ತಿಳಿದುಕೊಂಡಿಲ್ಲ.

ಕೆಎ 16-ಇಸಿ-1154 ರ ದ್ವಿಚಕ್ರ ವಾಹನವನ್ನು ರಂಗಸ್ವಾಮಿ ಎನ್ನುವವರು ಚಾಲನೆ ಮಾಡತ್ತಿದ್ದರು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ನನ್ನ ಅಳಿಯ ಮಹಲಿಂಗಪ್ಪ ಪೋಲೀಸರಿಗೆ ದೂರು

This is a True Copy of the Court Records Online. Authenticated @ districts.ecourtsindia.com/cnr/KACD310015782016/truecopy/order-5.pdf

ಕೊಟ್ಟಿದ್ದರು ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ಅಪಘಾತ ರಂಗಸ್ವಾಮಿಯ ತಪ್ಪಿನಿಂದ ಸಂಬವಿಸಿದೆ ಎಂದು ಪಿರ್ಯಾದುದಾರ ಆರೋಪ ಮಾಡಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅಪಘಾತದ ದಿನ 1 ನೇ ಎದುರುದಾರಳು ಕೆಎ-16 ಇಸಿ-1154 ರ ದ್ವಿಚಕ್ರ ವಾಹನವನ್ನು 2 ನೇ ಎದುರುದಾರನಿಗೆ ಚಾಲನೆ ಮಾಡಲು ಕೊಟ್ಟಿರಲಿಲ್ಲ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಕೆಎ-16 ಇಸಿ-1154 ರ ದ್ವಿಚಕ್ರ ವಾಹನದ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ ಅಪಘಾತವಾದ ನಂತರ ಚಿಕಿತ್ಸೆಗಾಗಿ ನನ್ನ ಮಗನನ್ನು ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ಆತ ಮಾರ್ಗಮಧ್ಯ ಮೃತಪಟ್ಟಿದ್ದಾನೆ. ಕೆಎ-16 ಆರ್-3495 ರ ದ್ವಿಚಕ್ರ ವಾಹನದ ಮಾಲೀಕರು ಗಿರೀಶ್ ತಂದೆ ಪರಮೇಶ್ವರಪ್ಪ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಅಳಿಯ ಮಹಲಿಂಗಪ್ಪ ನೀಡಿದ ದೂರಿನನ್ವಯ ದಾಖಲಾದ ಪ್ರಕರಣದಲ್ಲಿ ಅವರು ಏನು ಸಾಕ್ಷಿ ಹೇಳಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

ನಾನು ಹಾಗೂ ಗಿರೀಶ್ ಸೇರಿ ಕೆಎ-16 ಇಸಿ-1154 ರ ದ್ವಿಚಕ್ರ ವಾಹನದ ಚಾಲಕ ಹಾಗೂ ಮಾಲೀಕನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 2 ನೇ ಎದುರುದಾರ ಯಾವುದೇ ತಪ್ಪು ಮಾಡದಿದ್ದರೂ ಸಹ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2 ನೇ ಎದುರುದಾರರ ಪರಃ ಶ್ರೀ ಎಸ್ ಜೆ ವಕೀಲರಿಂದ**

(ಸಾಕ್ಷಿದಾರರು ನ್ಯಾಯಾಲಯದಲ್ಲಿ ಹಾಜರಿದ್ದು 2 ನೇ ಎದುರುದಾರರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಈಗಾಗಲೇ ನ್ಯಾಯಾಲಯ ಸಾಕಷ್ಟು ಸಮಯಾವಕಾಶವನ್ನು ನೀಡಿರುವುದರಿಂದ ಪಾಟೀ ಸವಾಲನ್ನು ಮುಂದೂಡಲು ಸಕಾರಣಗಳು ಇಲ್ಲದ

This is a True Copy of the Court Records Online. Authenticated @ districts.ecourtsindia.com/cnr/KACD310015782016/truecopy/order-5.pdf

ಕಾರಣ ವಕೀಲರ ಕೋರಿಕೆಯನ್ನು ತಿರಸ್ಕರಿಸಿ 2 ನೇ ಎದುರುದಾರನ ಪರವಾಗಿ ಸಾಕ್ಷಿಯ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ವಮತ್ತು ಜೆ ಎಂ ಎಫ್ ಸಿ ಹಿರಿಯೂರು.

This is a True Copy of the Court Records Online. Authenticated @ districts.ecourtsindia.com/cnr/KACD310015782016/truecopy/order-5.pdf

www.ecourtsindia.com